# ‘ಶಾಂತ ವಾತಾವರಣದಲ್ಲಿ ದೇವರ ಭಜಿಸಿ’

ಪ್ರಜಾವಾಣಿ ವಾರ್ತೆ



ಕೋಡಶಿಂಗೆಯ ಸ್ವರ್ಣವಲ್ಲೀ ಶಾಖಾ ಮಠದಲ್ಲಿ ಲಕ್ಷ ತುಳಸಿ ಅರ್ಚನೆ ಹಾಗೂ ಮತ್ತಿತರ ಧಾರ್ಮಿಕ ಕಾರ್ಯಕ್ರಮದ ಸಮಾರೋಪದಲ್ಲಿ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಮಾತನಾಡಿದರು

ಶಿರಸಿ: ‘ಶ್ರದ್ಧೆ, ಶಾಂತ ವಾತಾವರಣದಲ್ಲಿ ದೇವರ ಭಜಿಸಬೇಕು. ಆಗ ದೇವರ ಅನುಗ್ರಹ ಸಾಧ್ಯ’ ಎಂದು ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಹೇಳಿದರು.

ಕೋಡಶಿಂಗೆಯಲ್ಲಿ ಸ್ವರ್ಣವಲ್ಲೀ ಶಾಖಾ ಮಠದಲ್ಲಿ ಲಕ್ಷ ತುಳಸಿ ಅರ್ಚನೆ ಹಾಗೂ ಮತ್ತಿತರ ಧಾರ್ಮಿಕ ಕಾರ್ಯಕ್ರಮದ ಸಮಾರೋಪದಲ್ಲಿ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನುಡಿದರು.

‘ದೇವರ ಉಪಾಸನೆಗೆ ಮೂರು ದಾರಿ ಇದೆ. ಪ್ರತಿಮೆಯಲ್ಲಿ ದೇವರ ಪೂಜೆ, ಅಗ್ನಿಯಲ್ಲಿ ದೇವರ ಪೂಜೆ, ಹೃದಯದಲ್ಲಿ ದೇವರ ಪೂಜೆ ಮಾಡಬಹುದು. ಈ ಮೂರು ಮಾರ್ಗ ಪ್ರತಿಮೆಯಲ್ಲಿ ದೇವರ ಪೂಜೆ ಎಲ್ಲರಿಗೂ ಇಷ್ಟವಾದದ್ದು’ ಎಂದರು.

‘ಹಿಂದೂ ಧರ್ಮದಲ್ಲಿ ಪ್ರತಿಮಾ ಪೂಜೆ ಮಾತ್ರವಿಲ್ಲ. ಅಗ್ನಿಯಲ್ಲಿ ಉಪಾಸನೆ ಇದೆ. ಹೃದಯದಲ್ಲಿ ದೇವರ ಉಪಾಸನೆ ಕೂಡ ಇದೆ. ಎಲ್ಲ ಕಡೆ ದೇವರ ಇರುವಿಕೆ ಅನುಭವಕ್ಕಾಗಿ ಈ ಮೂರು ಸಾಧನಗಳಾಗಿವೆ. ಅಂತರಂಗ, ಬಾಹ್ಯ ಉಪಾಸನೆಗಳಾಗಿವೆ’ ಎಂದು ಹೇಳಿದರು.

‘ಮೂರು ಸಾಧನದಲ್ಲಿ ಒಂದಾದರೂ ಹಿಡಿದುಕೊಳ್ಳದೇ ಹೋದರೆ ದೇವರ ಅನುಭವ ಬರುವುದೇ ಇಲ್ಲ. ಭಗವಂತನ ನಾಮ ಸಂಕೀರ್ತನೆ, ಮಂತ್ರ ಉಚ್ಚಾರಣೆ ಬೇಕು’ ಎಂದರು.

ಈ ವೇಳೆ ಕರೂರು ಸೀಮಾ ಅಧ್ಯಕ್ಷ ಉಮಾಪತಿ ಭಟ್, ಮತ್ತಿಗಾರ, ದೇವಸ್ಥಾನದ ಅಧ್ಯಕ್ಷ ವಿಶ್ವನಾಥ ಭಟ್ ಇನ್ನಿತರರು ಇದ್ದರು.